(ಶ್ರೀ ಬಿ. ಪುಟ್ಟಸ್ವಾಮಯ್ಯ)

ಕೋರ್ಟಿಗೆ ಹೋಗಬೇಕು, ಹೈಕೋರ್ಟಿಗೆ ಹೋಗಬೇಕೋ ಅಥವಾ ಸುಪ್ರೀಂ ಕೋರ್ಟಿಗೆ ಹೋಗಬೇಕೋ ಎಂದು ಕೇಳುತ್ತಿದ್ದಾರೆ. ಅವರೆಲ್ಲರೂ ಈಗ ಬಹಳ ತೊಂದರೆಯಲ್ಲಿರುವುದರಿಂದ ಅನೇಕರು ಈಗಾಗಲೇ ಕೋರ್ಟಿಗೆ ಹೋಗಬೇಕಾಗಿ ಬಂತು. ಕೋರ್ಟಿನಲ್ಲಿ ಉಪಾಧ್ಯಾಯರ ಪರ ತೀರ್ಮಾನವಾಗಿದ್ದರೂ, ಸುಪ್ರೀಂ ಕೋರ್ಟಿನಲ್ಲಿ ಇದರ ಬಗ್ಗೆ ಸ್ಪೆಷಲ್ ಆಗಿದ್ದರೂ ಸಹ ಸರ್ಕಾರ ಇದರ ಬಗ್ಗೆ ಗಮನ ಕೊಡದೆ ಇರುವುದರಿಂದ ಅನೇಕ ಜನ ಉಪಾಧ್ಯಾಯರು ವರ್ಗವಾಗಿದ್ದಾರೆ. ಅವರಿಗೆ ಅಲ್ಲಿ ಸರಿಯಾದ ಸ್ಥಳವಿಲ್ಲ ಈ ವಿಷಯದಲ್ಲಿ ಸರ್ಕಾರದವರು ಏನು ಮಾಡಿದ್ದಾರೆಂಬುದನ್ನು ಈ ಸಭೆಯಲ್ಲಿ ತಿಳಿಸಬೇಕು.

ಅಧ್ಯಕ್ಷರು :— ಮಾನ್ಯ ಶ್ರೀ ಕೃಷ್ಣಪ್ಪನವರು ಇದರ ಬಗ್ಗೆ ಒಂದು ನೋಟೀಸನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ ಅದನ್ನು ಕಾಲ್ ಅಟೆನ್‌ಷನ್ ನೋಟೀಸಾಗಿ ಪರಿಗಣಿಸಿ ಅದರ ಬಗ್ಗೆ ಉತ್ತರವನ್ನು ಜಾಗ್ರತೆಯ್ಯಾಗಿ ಕಳುಹಿಸ ಬೇಕೆಂದು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ಇದು ಬಡ ಜನರ ವಿಷಯ. ಅಭಾವ ಕಾಲದಲ್ಲಿ ಸುಮಾರು ಮೂರು ನಾಲ್ಕು ತಿಂಗಳುಗಳಿಂದಲೂ ಅವರಿಗೆ ಸಂಬಳ ವಿಲ್ಲದಿದ್ದರೆ ಅವರಿಗೆ ಎಷ್ಟು ತೊಂದರೆಯಾಗುತ್ತದೆಂಬುದನ್ನು ಯೋಚಿಸಬೇಕು.

ಅಧ್ಯಕ್ಷರು : ಹೇಳಿದ್ದನ್ನೇ ಹೇಳುವುದು ಸರಿಯಲ್ಲ

ಶ್ರೀ ಬಿ. ಪುಟ್ಟಸ್ವಾಮಯ್ಯ : ಅವರು ಬಹಳ ಬಡವರು. ಮನೆಯಲ್ಲಿ ಅವರಿಗೆ ರೇಶನ್ ಸಹ ಸಿಗದೆ ತೊಂದರೆಯಾಗುತ್ತದೆ.

ಅಧ್ಯಕ್ಷರು : ಈ ಕಾಲದಲ್ಲಿ ರೇಷನ್ನಿಗೆ ಎಲ್ಲರಿಗೂ ಕಷ್ಟ ಇದೆ.

OPERATION OF RELIEF MEASURES IN DROUGHT HIT AREAS

ಶ್ರೀ ಬಾಪುಗೌಡ ರಾಮಪ್ಪ.—ಗುಲ್ಬರ್ಗ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಕ್ಷಾಮಪೀಡಿತ ಪ್ರದೇಶಗಳಲ್ಲಿ ರಿಲೀಫ ಕಾಮಗಾರಿಗಳು ನಿಂತು ಹೋಗಿವೆ. ಇದರಿಂದಾಗಿ ಸುಮಾರು ಒಂದು ಸಾವಿರ ಜನ ಗ್ರಾಜುಯೇಟ್ಸ್, ಇಂಜನಿಯರ್‌ಗಳು ಮತ್ತು ಡಿಪ್ಲೋಮಾ ಹೋಲ್ಡರುಗಳು ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಈ ಬಗ್ಗೆ ನಾನು ಒಂದು ನೋಟಿಸನ್ನು ತಮಗೆ ಕಳುಹಿಸಿದ್ದೆ.

ಅಧ್ಯಕ್ಷರು : ನಾನು ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಅದಕ್ಕೆ ಸರ್ಕಾರದವರು ಜವಾಬು ಕೊಡುತ್ತಾರೆ.

ಶ್ರೀ ಕೆ. ಹೆಚ್. ಹನುಮೇಗೌಡ : ನಾನು ನಮ್ಮ ಹಾಸನ ಟೌನ್ ವಿಚಾರದಲ್ಲಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು : ಅದನ್ನು ಕಾಲ್ ಅಟೆನ್‌ಷನ್ ನೋಟೀಸಾಗಿ ಪರಿಗಣನೆ ಮಾಡಿ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಹೇಳುತ್ತೇನೆ.

RATION SUPPLY THROUGH THE JANATA BAZARS IN BANGALORE

ಶ್ರೀ ಎಂ. ಎನ್. ಕೃಷ್ಣನ್ : ಬೆಂಗಳೂರು ನಗರದಲ್ಲಿನ ಆಹಾರ ಧಾನ್ಯಗಳ ವಿಚಾರದಲ್ಲಿ ಒಂದು ನಿಲುವಳಿ ಸೂಚನೆಯನ್ನು ನಾನು ತಮಗೆ ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ. ಅದರಲ್ಲಿ ಮುಖ್ಯವಾಗಿ ಬೆಂಗಳೂರು ನಗರದಲ್ಲಿ ಈಗ 4-5 ಜನತಾ ಬಜಾರಗಳಲ್ಲಿ ಆಹಾರಧಾನ್ಯಗಳನ್ನು ಮಾರಾಟ ಮಾಡುತ್ತಿದ್ದಾರೆ. ಎಲ್ಲಾ ಜನಗಳು ಆ ಜನತಾ ಬಜಾರುಗಳಿಗೇ ಬರಬೇಕಾದರೆ ಬಹಳ ಕಷ್ಟವಾಗಿದೆ.

ಅಧ್ಯಕ್ಷರು : ಆಹಾರ ಖಾತೆಯ ರಾಜ್ಯ ಮಂತ್ರಿಗಳು ಬರಲಿ ಅವರು ಬಂದಮೇಲೆ ಅವರು ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ತಿಳಿಸಲು ಪ್ರಯತ್ನ ಮಾಡೋಣ.

Statement by the Minister for Agriculture and Forests :— Re : Shortage of fertilisers in the State ;

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ ನಾನು ತಮಗೆ ಗೊಬ್ಬರದ ಬಗ್ಗೆ ಒಂದು ಅಟೆನ್‌ಷನ್ ನೋಟೀಸು ಕಳುಹಿಸಿದ್ದೆ. ಈಗ ನಮ್ಮ ಹಾಸನ ಜಿಲ್ಲೆಯಲ್ಲಿ ಬತ್ತದ ಪೈರನ್ನು ನಾಟಿ ಹಾಕುವ ಕಾಲ. ಈಗ ಅಲ್ಲಿನ ರೈತರಿಗೆ ಗೊಬ್ಬರವನ್ನು ಕೊಟ್ಟರೆ ಒಳ್ಳೆಯದು. ಆಮೇಲೆ ಅವರಿಗೆ ಗೊಬ್ಬರವನ್ನು ಕೊಟ್ಟರೆ ಪ್ರಯೋಜನವಿಲ್ಲ. ಈಗ ಒಂದು ತಿಂಗಳಿಂದ ಹಾಸನ ಜಿಲ್ಲೆಯಲ್ಲಿ ಒಂದು ಕೆ. ಜಿ. ಗೊಬ್ಬರ ಸಿಕ್ಕುತ್ತಿಲ್ಲ. ಅಗ್ರಿಕಲ್ಚರಲ್ ಆಫೀಸು ಮತ್ತು ತಾಲ್ಲೂಕು ಸೊಸೈಟಿಗಳಿಗೆ ರೈತರು ಗೊಬ್ಬರಕ್ಕೆ ಹೋಗಿ ಸಿಕ್ಕದೆ ತಿರುಗಿ ವಾಪಸ್ಸು ಬರುತ್ತಿದ್ದಾರೆ. ರೈತರಿಗೆ ಗೊಬ್ಬರವನ್ನು ಕೊಡದಿದ್ದರೆ ರೈತ ಹೇಗ ವ್ಯವಸಾಯ ಮಾಡಿ ಹೆಚ್ಚು ಉತ್ಪಾದನೆ ಮಾಡಿ ಸಾಲ ಸೋಲಗಳನ್ನು ತೀರಿಸುವುದಕ್ಕೆ ಅವಕಾಶವಾಗುತ್ತದೆ? ಸರ್ಕಾರದವರು ಆ ಕಡೆ ಗಮನ ಕೊಡದಿದ್ದರೆ ರೈತ ಹೀನಸ್ಥಿತಿಗೆ ಬರುತ್ತಾನೆ ಎಂದು ನಾನು ಈ ಕಡೆ ಸರ್ಕಾರದ ಗಮನವನ್ನು